ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಗುರುವಾರ, ದಿನಾಂಕ : 12 ನೇ ಮಾರ್ಚ್, 2020

ಚಿತ್ರರಂಗದ ಕನಸಾಗಿರುವ ಚಿತ್ರನಗರಿ ಕುರಿತು

ಡಾ. ಜೈಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು) -

117 (1014) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ-

(ಅ) ಚಿತ್ರರಂಗದ ಸಮಗ್ರ ಅಭಿವೃದ್ಧಿಯ ಬೆಳವಣಿಗೆಗಾಗಿ ನಿರ್ಮಾಣಗೊಳ್ಳುವ ಚಿತ್ರನಗರಿ ಯಾವ ಹಂತದಲ್ಲಿದೆ ;

(ಆ) ಹೆಸರುಘಟ್ಟದಲ್ಲಿ, ಮೈಸೂರಿನಲ್ಲಿ, ರಾಮನಗರದಲ್ಲಿ ಅಥವಾ ತಾತಗುಣಿ ಎಸ್ಟೇಟ್‌ನಲ್ಲಿ ಚಿತ್ರನಗರಿ ಇದೆಯೇ ;

(ಇ) ಹೆಸರುಘಟ್ಟದಲ್ಲಿ ಚಿತ್ರನಗರಿಗಾಗಿ ಮೀಸಲಿಟ್ಟ ಜಮೀನಿನ ವಿವರ ಹಾಗೂ ಇಲ್ಲಿಯವರೆಗೂ ಖರ್ಚಾದ ಹಣದ ವಿವರ ಮತ್ತು ಮೈಸೂರಿನಲ್ಲಿ ಚಿತ್ರನಗರಿಗಾಗಿ ಮೀಸಲಿಟ್ಟ ಜಮೀನಿನ ವಿವರ ಮತ್ತು ಅದಕ್ಕಾಗಿ ಮಾಡಿದ ಖರ್ಚು ವೆಚ್ಚದ ವಿವರ ನೀಡುವುದು ;

(ಈ) ಈ ಚಿತ್ರನಗರಿ ಕೆಲಸ ಕಾರ್ಯಗಳು ಯಾವಾಗ ಪ್ರಾರಂಭವಾಗುವುದು ಮತ್ತು ಯಾವಾಗ ಚಿತ್ರರಂಗ ಇದನ್ನು ಬಳಸಿಕೊಳ್ಳಬಹುದು ?